KACN320005912010

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಕೊಳ್ಳೇಗಾಲ.</u>**

**<u>ದಿನಾಂಕ: 24ನೇ ಏಪ್ರಿಲ್ 2026</u>**

<u>ಉಪಸ್ಥಿತರು</u>

ಶ್ರೀಮತಿ. ಕಾವ್ಯಶ್ರೀ ಎಂ.
ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಕೊಳ್ಳೇಗಾಲ.

**<u>ಓ.ಎಸ್. ಸಂಖ್ಯೆ: 69-2010</u>**

**ವಾದಿಗಳು** : ಶ್ರೀಮತಿ ಜಯಮ್ಮ ಹಾಗೂ ಇನ್ನೊಬ್ಬರು

**(ಪ್ರತಿನಿಧಿಸುವವರು: ಶ್ರೀ ಎಂ. ಆರ್. ಕೆ., ವಕೀಲರು)**

**ವಿರುದ್ಧ**

**ಪ್ರತಿವಾದಿಗಳು** : ಶ್ರೀ ನಟರಾಜು ಹಾಗೂ ಇತರರು

**( ಪ್ರತಿನಿಧಿಸುವವರು: ಶ್ರೀ ಎಂ.ಡಿ., ಎ.ಜಿ.ಪಿ., ಎ.ಎಸ್. ಆರ್., ಬಿ.ಡಿ.,ವಕೀಲರು,)**

**-:<u>ಮಧ್ಯಂತರ ಅರ್ಜಿ ಸಂಖ್ಯೆ 21</u> :-**

**ಅರ್ಜಿದಾರರು** : ಶ್ರೀಮತಿ ಜಯಮ್ಮ ಹಾಗೂ ಇನ್ನೊಬ್ಬರು

......... ವಾದಿಗಳು

**ವಿರುದ್ಧ**

**ಎದುರುದಾರರು** **:** ಶ್ರೀ ನಟರಾಜು ಹಾಗೂ ಇತರರು

**........** ಪ್ರತಿವಾದಿಗಳು

| | | |
|---|---|---|
| *i* | ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ **VI** ನಿಯಮ **17** ಸಹವಾಚಕ ಕಲಂ **151** |
| *ii* | ಅರ್ಜಿಯಲ್ಲಿ ಕೋರಿರುವ ಪರಿಹಾರ | ವಾದ ಪತ್ರದ ತಿದ್ದುಪಡಿ ಆದೇಶವನ್ನು ಕೋರಿ |
| *iii* | ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | **09.12.2022** |
| | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ **21** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | **18.01.2023** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | **24.04.2026** |

**ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 21ರ ಮೇಲಿನ ಆದೇಶ**

ಅರ್ಜಿದಾರರು/ವಾದಿ ರವರು ಮಧ್ಯಂತರ ಅರ್ಜಿ ಸಂಖ್ಯೆ 21ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರಡಿಯಲ್ಲಿ, ಅರ್ಜಿಯಲ್ಲಿ ಪ್ರಸ್ತಾಪಿಸಲ್ಪಟ್ಟ ಸಂಗತಿಗಳನ್ನು ತಿದ್ದುಪಡಿ ಮೂಲಕ ವಾದಪತ್ರಕ್ಕೆ ಸೇರಿಸಲು ಅನುಮತಿ ಕೋರಿ ಮಧ್ಯಂತರ ಅರ್ಜಿಯನ್ನು ದಾಖಲು ಮಾಡಿರುತ್ತಾರೆ.

2. ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ವಾದಿಯು ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ವಾದಪತ್ರದ ಸಂಗತಿಗಳನ್ನು ಪರಿಗಣಿಸ ಬೇಕಾಗಿ ಕೋರಿ ಕೊಂಡಿರುತ್ತಾರೆ. ಅರ್ಜಿಯಲ್ಲಿ ಕೋರಿಕೊಂಡಿರುವ ಸಂಗತಿಗಳು ವಾದಪತ್ರದಲ್ಲಿನ ಸಂಗತಿಗಳಿಗೆ ವಿರುದ್ದವಾಗಿರುವುದಿಲ್ಲ, ಬದಲಾಗಿ ಪರಿಸ್ಥಿತಿಯ ಬಗೆಗಿನ ಸ್ಪಷ್ಟೀಕರಣವಾಗಿರುತ್ತದೆ. ಮುಂದುವರೆದು, ಪ್ರಸ್ತಾಪಿಸಲ್ಪಟ್ಟಿರುವ ತಿದ್ದುಪಡಿಯು ದಾವೆಯ ಸ್ವರೂಪವನ್ನಾಗಲೀ ಅಥವಾ ವ್ಯಾಜ್ಯ ಕಾರಣವನ್ನು ಬದಲಾಯಿಸುವುದಿಲ್ಲ. ಈ ದಾವೆಯಲ್ಲಿ ಪೂರ್ಣ ಮತ್ತು ಅಂತಿಮ ಪರಿಹಾರವನ್ನು ಪಡೆಯುವ ಕಾರಣಕ್ಕಾಗಿ ಅರ್ಜಿಯನ್ನು ದಾಖಲು ಮಾಡಲಾಗಿದೆ. ಅರ್ಜಿಯಲ್ಲಿ ಕೋರಿಕೊಂಡಿರುವ ವಿಷಯದ ಬಗ್ಗೆ ಎದುರು ಪಕ್ಷಗಾರರಿಗೂ ಸಹ ತಿಳುವಳಿಕೆ ಇರುತ್ತದೆ, ಹಾಗಾಗಿ, ಅರ್ಜಿಯನ್ನು ಪುರಸ್ಕರಿಸುದರಿಂದ ಯಾವುದೇ ರೀತಿಯಾದ ಅನ್ಯಾಯವಾಗುವಿದಿಲ್ಲ. ಪ್ರಸ್ತಾಪಿಸಲ್ಪಟ್ಟ ತಿದ್ದುಪಡಿಯು ಈ ವಾದಪತ್ರದಲ್ಲಿನ ಸಂಗತಿಗಳಿಗೆ ಹಾಗೂ ಪ್ರಸ್ತಾಪಿಸಲ್ಪಟ್ಟ ತಿದ್ದುಪಡಿಗೂ ಸಹ ಸಂಬಂದ ಇರುತ್ತದೆ. ಈ ದಾವೆಯಲ್ಲಿ ನೈಜ ಅರ್ಥದ ವಿಚಾರಣೆ ಇನ್ನು ಬಾಕಿ ಇರುತ್ತದೆ. ಪ್ರಸ್ತಾಪಿಸಲ್ಪಟ್ಟ ತಿದ್ದುಪಡಿಯು ದಾವೆಯನ್ನು ನ್ಯಾಯ ಸಮ್ಮತವಾಗಿ ತೀರ್ಮಾನಿಸಲು ಅವಶ್ಯಕವಾಗಿರುತ್ತದೆ. ಸದರಿ ಸಂಗತಿಗಳು ವಾರಸುದಾರಿಗೆ ಹಕ್ಕ ಹಾಗೂ ರೂಡಿಗತವಾದಂತಹ ಆಚರಣೆಗೆ ಸಂಬಂದಿಸಿರುತ್ತದೆ.

ಮುಂದುವರೆದು, ಕಾನೂನು ಜ್ಞಾನದ ಕೊರತೆ ಮತ್ತು ಸಂವಹನ್ದ ಅಂತರದಿಂದ ಹಾಗೂ ದಾರ್ಮಿಕ ದತ್ತಿ ಆಯುಕ್ತರ ಸಮಕ್ಷಮ ಕಾನೂನು ಬಾಹಿರವಾಗಿ ಪ್ರತಿಪಾದಿಸಿರುವ ಹಕ್ಕುಗಳ

ಪ್ರತಿಪಾದನೆಗಾಗಿ ಸದರಿ ತಿದ್ದುಪಡಿಯು ಅವಶ್ಯಕವಾಗಿರುತ್ತದೆ. ಸದರಿ ತಿದ್ದುಪಡಿಯನ್ನು ಪುರಸ್ಕರಿಸದೇ ಇದ್ದಲ್ಲಿ, ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆ. ಹಾಗೂ ಸದರಿ ತಿದ್ದುಪಡಿಯು ವಾದಿಯ ದಾವೆಯನ್ನು ಪೂರ್ಣವಾಗಿ ತೀರ್ಮಾನಿಸುವ ನಿಟ್ಟಿನಲ್ಲಿ ಅವಶ್ಯಕ ಸಂಗತಿಯಾಗಿರುತ್ತದೆ. ಸರದಿ ಪೂಜೆಗೆ ಸಂಬಂದಿಸಿದಂತೆ ಪ್ರತಿವಾದಿಯ ಕಡೆಯಿಂದ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತಿದೆ. ಮುಂದುವರೆದು, ವರದನಾಯಕ ಮತ್ತು ದೇವಮ್ಮರವರು ಬೇರೆಯವರ ಸಹಾಯದಿಂದ ಪೂಜಾ ಕೈಕಂರ್ಯಗಳನ್ನು ನಡೆಸುತ್ತಿದ್ದರು. ಸದರಿ ಪೂಜೆಗೆ ಅವರ 2 ಮಕ್ಕಳು ಮಾತ್ರವೇ ಅರ್ಹರಾಗಿರುತ್ತಾರೆ. ಅದರಂತೆ, ವಾದಿಯ ಪತಿ ಮತ್ತು ಎರಡನೇ ವಾದಿಯ ತಂದೆ ಮೂರು ತಿಂಗಳ ಅಂದರೆ, ಫೆಬ್ರವರಿ ಮಾಹಿಯಿಂದ ಏಪ್ರೀಲ್ ಮಾಹೆಯ ಅಂತ್ಯದವರೆಗೂ ಸಹ ಪೂಜೆ ಮಾಡಲು ಅರ್ಹರಾಗಿರುತ್ತಾರೆ. ವಾದಿಗಳು ಈಗಾಗಲೇ ಸದರಿ ಪೂಜೆಯ ಹಕ್ಕನ್ನು ಕೋರಿಕೊಂಡಿದ್ದು, ವರದನಾಯಕರವರ ಮರಣದಿಂದ ಉಳಿದ ಅವಧಿಗೂ ಸಹ ಪೂಜಾ ಹಕ್ಕನ್ನು ಕೋರಿಕೊಳ್ಳುವುದು ಅವಶ್ಯಕವಾಗಿರುತ್ತದೆ.

3. ಮೇಲ್ಕಂಡ ಅರ್ಜಿಗೆ 1ನೇ ಪ್ರತಿವಾದಿಯು ತಮ್ಮ ತಕರಾರನ್ನು ದಾಖಲು ಮಾಡಿದ್ದು, ಅರ್ಜಿಯು ಕಾನೂನಾತ್ಮಕವಾಗಲೀ, ವಾಸ್ತವಿಕವಾಗಲೀ ಉರ್ಜಿತವಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು, ಸುಮಾರು 12 ವರ್ಷಗಳು ಕಳೆದ ನಂತರ ತಿದ್ದುಪಡಿ ಕೋರಿ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ವಿವಾದಾಂಶವನ್ನು ರಚಿಸಿದ ನಂತರ ತಿದ್ದುಪಡಿಯನ್ನು ಮಾಡಲು ಅವಕಾಶ ಇರುವುದಿಲ್ಲ. ಹಾಗೂ ಕಾಲಮಿತಿ ಮೀರಿ ಅರ್ಜಿಯನ್ನು ದಾಖಲು ಮಾಡಿರುವುದಕ್ಕೆ ಸಂಭಂದಿಸಿದಂತೆ ಯಾವುದೇ ಕಾರಣಗಳನ್ನು ನಿರೂಪಿಸಿರುವುದಿಲ್ಲ. ಕಾಲಪರಿಮಿತಿ ಮೀರಿದ ತಿದ್ದುಪಡಿ ಅರ್ಜಿಯು ಉರ್ಜಿತವಾಗಿರುವುದಿಲ್ಲ. ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣಪತ್ರಿಕೆಯಲ್ಲಿ ಯಾವ ಕಾರಣಕ್ಕಾಗಿ ಕಾಲವಿಳಂಬ ಮಾಡಿ ಅರ್ಜಿಯನ್ನು ದಾಖಲು ಮಾಡಲಾಗಿರುತ್ತದೆ ಎಂಬುದನ್ನು ನಿರೂಪಿಸಿರುವುದಿಲ್ಲ. ದಾವೆಯ ಸ್ವರೂಪವೇ ಬದಲಾವಣೆಯಾಗುತ್ತದೆ. ಅದೇ ರೀತಿಯಾಗಿ 2010ರಲ್ಲಿ ಹಕ್ಕನ್ನು ನಿರಾಕರಿಸಿದ್ದು, ಮೂರು ವರ್ಷಗಳ ಒಳಗಾಗಿ ತಮ್ಮ ಹಕ್ಕನ್ನು ಪ್ರತಿಪಾದಿಸ ಬೇಕಾಗಿರುತ್ತದೆ. ಹಾಗಾಗಿ, ಕಾಲಮಿತಿ ಮೀರಿದ ಹಕ್ಕನ್ನು ತಿದ್ದುಪಡಿ ಮೂಲಕ ವಾದಪತ್ರಕ್ಕೆ ತರಲು ಸಾಧ್ಯವಿರುವುದಿಲ್ಲ. ಈ ಎಲ್ಲಾ ಕಾರಣಗಳಿಗಾಗಿ, ಅರ್ಜಿಯನ್ನು ವಜಾಗೋಳಿಸಬೇಕಾಗಿ ಕೋರಿಕೊಂಡಿರುತ್ತಾರೆ.

4. ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

ಅಂಶ 1:- ಅರ್ಜಿದಾರರು/ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 21 ರಲ್ಲಿ ಪ್ರಸ್ತಾಪಿಸಲ್ಪಟ್ಟ ತಿದ್ದುಪಡಿಯು ದಾವೆಯಲ್ಲಿನ ಸಂಗತಿಗಳನ್ನು ನಿರ್ಧರಿಸುವಲ್ಲಿ ಅಗತ್ಯವಾಗಿರುತ್ತದೆ ಎಂಬುದಾಗಿ ರುಜುವಾತು ಪಡಿಸಿರುವರೇ?

ಅಂಶ 2:- ಯಾವ ಆದೇಶ?

5. ಉಭಯಪಕ್ಷಗಾರರ ವಾದ ವಿವಾದಗಳನ್ನು ಆಲಿಸಲಾಯಿತು. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳ ಅನ್ವಯ ಈ ಮೇಲ್ಕಂಡ ಸಂಗತಿಗಳಿಗೆ ಈ ಕೆಳಕಂಡರೆ ಉತ್ತರಿಸಲಾಗಿದೆ.

ಅಂಶ 1:- ಸಕರಾತ್ಮಕವಾಗಿ,

ಅಂಶ 2:- ಈ ಕೆಳಕಂಡ ಆದೇಶದಂತೆ,

**ಕಾರಣಗಳು**

**6. ಅಂಶ 1:-** ವಾದಿಯು ಕೊಳ್ಳೇಗಾಲ ತಾಲ್ಲೂಕು, ಶಿವನಸಮುದ್ರ ಗ್ರಾಮದ, ಮಾರಮ್ಮನ ದೇವಸ್ಥಾನದ ಸದರಿ ಪೂಜಾ ಹಕ್ಕನ್ನು ಘೋಷಿಸುವಂತೆ, ಹಾಗೂ ಇನ್ನಿತರ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಡಿಡಬ್ಲ್ಯೂ-1ರವರ ಪಾಟಿ ಸವಾಲಿನ ಹಂತದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿ ವಾದಪತ್ರದಲ್ಲಿನ ಸಂಗತಿಗಳನ್ನು ತಿದ್ದುಪಡಿ ಮೂಲಕ ವಾದಪತ್ರಕ್ಕೆ ಸೇರ್ಪಡೇ ಮಾಡಲು ಅನುಮತಿ ಕೋರಿಕೊಂಡಿರುತ್ತಾರೆ.

ವಾದಿಯು ತನ್ನ ಅರ್ಜಿಯಲ್ಲಿ ಪ್ರಸ್ತಾಪಿಸಲ್ಪಟ್ಟ ಸಂಗತಿಯಂತೆ, ಚಿಕ್ಕರವಳಯ್ಯ @ ಚಿಕ್ಕಣ್ಣರವರ ಮಗ ನಾಗರಾಜು ಈ ದಾವೆಯ ಮೂರನೇ ಪ್ರತಿವಾದಿಯ ಸಮಕ್ಷಮ ಅರ್ಜಿಯನ್ನು ಸಲ್ಲಿಸಿದ್ದು, ವಾದಿಗಳು ಸದರಿ ಅರ್ಜಿಯನ್ನು ಪಕ್ಷಗಾರರಾಗಿ ಸೇರ್ಪಡೆಯಾಗಿದ್ದು, ಸದರಿ ಅರ್ಜಿಯಲ್ಲಿ ಮೂರನೇ ಪ್ರತಿವಾದಿಯ ಆದೇಶದಂತೆ ಈ ದಾವೆಯನ್ನು ಹೂಡಲು ಅನಿವಾರ್ಯವಾಗಿರುತ್ತದೆ. ಸದರಿ ನಡಾವಳಿಯಲ್ಲಿನ ಪಕ್ಷಗಾರರು ಚಿಕ್ಕರವಳಯ್ಯ @ ಚಿಕ್ಕಣ್ಣರವರ ವಾರಸುದಾರರಾಗಿವುದಿಲ್ಲ. ವರದನಾಯಕರವರುಗಳು ವಾದಿಯ ಮೂಲಪುರುಷರ ರಕ್ತ ಸಂಬಂದಿಕರಾಗಿರುವುದಿಲ್ಲ. ಚಿಕ್ಕರವಳಯ್ಯರವರ ಪತ್ನಿ ದೇವಮ್ಮರವರ ಸಹೋದರನಾಗಿರುತ್ತಾರೆ. ಆದರೆ, ಸದರಿ ವರದನಾಯಕರು ಅಸಂಬಂದ್ಧವಾಗಿ ಪೂಜಾ ಹಕ್ಕನ್ನು ಮಂಡಿಸಿರುತ್ತಾರೆ. ಸದರಿಯವರು ಮೂಲ ಪುರುಷರಲ್ಲದ ಕಾರಣ ಸರದಿ ಪೂಜೆಗೆ ಅರ್ಹರಾಗಿರುವುದಿಲ್ಲ. ವಾದಿಗೆ ಸೇರಬೇಕಾದ ಪೂಜಾ ಹಕ್ಕನ್ನು ಕಸಿದು ಕೊಳ್ಳುವ ಪ್ರಯತ್ನ ಮಾಡುತ್ತಿರುತ್ತಾರೆ. ಚಿಕ್ಕರವಳಯ್ಯರವರಿಗೆ ಪೂಜಾಕೈಕಂರ್ಯಗಳು ಮಾಡಲು ಸಾಧ್ಯವಾಗದೇ ಇದ್ದ ಕಾರಣ ವರದನಾಯಕರವರ ಸಹಾಯ ಪಡೆದಿದ್ದರು ಹೊರತು, ಸದರಿ ವರದನಾಯಕರವರು ವಾದಿಯ ಕುಟುಂಬಕ್ಕೆ ಸೇರಿದವಾರಾಗಿರುವುದಿಲ್ಲ. ಹಾಗಾಗಿ, ವಾದಿಯ ಮಕ್ಕಳುಗಳು ಮಾತ್ರವೇ ಪೂಜಾ ಹಕ್ಕನ್ನು ಹೊಂದಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಸದರಿ ತಿದ್ದುಪಡಿಯ ಸಂಗತಿಗಳನ್ನು ಗಮನಿಸಲಾಗಿ, ವಾದಿಯರನ್ನು ಹೊರತುಪಡಿಸಿ, ಬೇರೆ ಯಾರಿಗೂ ಸಹ ದೊಡ್ಡರವಳಯ್ಯರವರ ಪೂಜಾ ಕೈಕಂರ್ಯದ ಅವಕಾಶವನ್ನು ಕೊಡಲು ಬರುವುದಿಲ್ಲ ಎಂಬ ಸಂಗತಿಯನ್ನು ನಿರೂಪಿಸಲಾಗಿರುತ್ತದೆ. ಮುಂದುವರೆದು, ಸದರಿ ತಿದ್ದುಪಡಿಯಂತೆ ಬೇರೆ ವ್ಯಕ್ತಿಗಳು ಬೇರೆ-ಬೇರೆ ಪ್ರಾಧಿಕಾರದ ಸಮಕ್ಷಮ ತಮಗೆ ಪೂಜಾ ಹಕ್ಕು ಇರುವುದಾಗಿ ಮಂಡಿಸುತ್ತಿದ್ದು, ಅವರಿಗೆ ಆ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಈ ದಾವೆಯಲ್ಲಿ ಈ ಮಧ್ಯಂತರ ಅರ್ಜಿಯನ್ನು ದಾಖಲು ಮಾಡಿದ ನಂತರ ಪಕ್ಷಗಾರರ ಸೇರ್ಪಡೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ. ಸದರಿ ಪಕ್ಷಗಾರರನ್ನು ಈ ದಾವೆಯ 5 ರಿಂದ 8 ನೇ ಪ್ರತಿವಾದಿ ಎಂಬುದಾಗಿ ಸೇರ್ಪಡೆ ಮಾಡಲಾಗಿರುತ್ತದೆ. ಆ ನಿಟ್ಟಿನಲ್ಲಿ ವಾದಿಯು ತನ್ನ ದಾವೆಗೆ ಸಂಬಂದಿಸಿದ ಎಲ್ಲಾ ಸಂಗತಿಗಳನ್ನು ನಿರೂಪಿಸುವುದು ಅವಶ್ಯಕವಾಗಿರುತ್ತದೆ.

***ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಖಂಡಿಕೆ 13 ರಿಂದ 17, 25, 26 ಮತ್ತು 33 ರಂತೆ***

***13. Order VI Rule 17, after the 2002 amendment to the Code, appears to contain two parts: Though on a plain reading, it appears that the aforementioned provision contains two separate parts, one dealing with applications seeking***

***amendment before commencement of trial and another post commencement of trial, on careful analysis, it appears that in certain circumstances, the applications filed under Order VI Rule 17 of the Code seeking amendment post commencement of trial need not pass the test of due diligence contemplated under proviso to Order VI Rule 17 of***

***the Code.***

***14.The question is, to what extent, the proviso curtails the power of the Court to amend pleadings after the commencement of trial.***

***15.On a plain reading of the proviso to Order VI Rule 17 of the Code, one can argue that an application seeking amendment is not permissible unless the person seeking amendment satisfies the Court that, despite due diligence, the party could not seek amendment before commencement of the trial.***

***16. The obvious question would be, if the party does not demonstrate "due diligence" to the satisfaction of the Court, should the application seeking amendment "post- commencement of trial" compulsorily suffer an order of dismissal? The answer is no. The reasons are as follows.***

***17.Whether the application seeking amendment, post-commencement of trial, is to be allowed or not has to be decided on the "nature of amendment sought" and not necessarily on the "due diligence test" at least in respect of applications seeking certain types of amendment, if not all. It does not mean that the***

***"due diligence" test has no application under proviso to Order VI Rule 17 of the Code. The relevance of "due diligence test" is dependent on the nature of the amendment sought and other attending circumstances, and not just dependent on the sole factor as to whether trial has commenced or not at the time of filing application seeking amendment.***

***25.The Court is of the considered view that in the following instances (illustratively and not exhaustively), applications seeking amendment of pleadings can be allowed without the "due diligence test," even if such applications are filed "post-commencement of trial."***

***Applications to:***

***(a) correct typographical errors in the dates of events, documents, etc.;***

***(b) correct property discrepancies in number, the extent, boundary or location, any or other misdescription of the property;***

***(c) insert events and developments that have taken place post-filing of the suit and which have a bearing on the final decision;***

***(d) incorporate a prayer owing to a subsequent event that has taken place during the pendency of the suit, keeping open the question of limitation;***

***(e) add a few additional facts or furnish better particulars to the facts already pleaded;***

***(f)add facts in support of the relief already claimed;***

***(g)seek relief in the alternative, which is in the nature of a lesser relief than the one already claimed. Example:***

***In a suit for declaration of exclusive title and injunction, an application seeking the alternative relief of partition.***

***(h) Seek additional relief or relief ancillary to the main relief when the relief sought by way of amendment is available based on the pleadings already made.***

***26. In the aforementioned situations (broadly or generally speaking, excluding exceptional cases), in case the application seeking amendment of pleading is rejected on the premise that the applicant has not passed the "due diligence" test, it would cause injustice and would defeat the object of the first (main) part of Order VI Rule 17 of the Code, which aims at minimizing or avoiding multiplicity of litigation and provides for determining real questions in controversy between the parties.***

***33. It is again a settled position of law, that amendment is permissible (in deserving cases) even in appellate stage. This again supports the view that the proviso has a limited role to play, when the amendment is sought post commencement of trial really to avoid multiplicity of litigation and resolve all the controversy between the parties connected to the lis.***

ಅದರಂತೆ, ಈ ದಾವೆಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 21 ನ್ನು ಪುರಸ್ಕರಿಸಿದ್ದು, ಆ ನಿಟ್ಟಿನಲ್ಲಿ ಸದರಿ ಪಕ್ಷಗಾರರಿಗೆ ಸಂಭಂದಿಸಿದಂತೆ ಮತ್ತು ದಾವೆಯನ್ನು ದಾಖಲು ಮಾಡಿದ ನಂತರ ಸಂಗತಿಗಳನ್ನು ದಾವೆಗೆ ಸೇರ್ಪಡೆ ಮಾಡುವುದು ಅವಶ್ಯಕವೆಂದು ಕಂಡು ಬಂದಿರುತ್ತದೆ. ಮುಂದುವರೆದು,ಅರ್ಜಿದಾರರು ನಿರೂಪಿಸಿರುವ ಸಂಗತಿಗಳು ದಾವೆಯ ಸ್ವರೂಪವನ್ನು ಬದಲಾವಣೆ ಮಾಡುವ ಯಾವುದೇ ಸಂಗತಿಗಳನ್ನು ಹೊಂದಿರುವುದಿಲ್ಲ. ಬದಲಾಗಿ, ತಮ್ಮ ದಾವೆಯಲ್ಲಿನ ಸಂಗತಿಯನ್ನು ಸ್ಪಷ್ಟೀಕರಿಸಿರುತ್ತಾರೆ. ಹಾಗಾಗಿ, ಅರ್ಜಿಯಲ್ಲಿನ ಸಂಗತಿಗಳಂತೆ ಹೊಸ ವಾದವನ್ನು ಎತ್ತಿರುವುದು ಸಹ ಕಂಡು ಬಂದಿರುವುದಿಲ್ಲ.

**7.** ಮುಂದುವರೆದು, ಪ್ರತಿವಾದಿಯು ತನ್ನ ವಾದವನ್ನು ಮಂಡಿಸಿತ್ತಾ, ಪೂಜಾ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಕೋರಿಕೊಳ್ಳಲು ಬರುವುದಿಲ್ಲ. ಯಾವ ಸಂಗತಿಯು ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಮೀರಿರುತ್ತದೆಯೋ ಅ ಸಂಗತಿಯನ್ನು ತಿದ್ದುಪಡಿ ಮೂಲಕ ವಾದಪತ್ರಕ್ಕೆ ತರಲು ಬರುವುದಿಲ್ಲ ಎಂಬುದಾಗಿ ತಮ್ಮ ವಾದನ್ನು ಮಂಡಿಸಿರುತ್ತಾರೆ. ಆದರೆ, ಈ ನ್ಯಾಯಾಲಯಕ್ಕೆ ಪೂಜೆ ಮಾಡುವ ಹಕ್ಕನ್ನು ನೀಡಲು ಬರುವುದಿಲ್ಲ ಎಂಬುದು ಎಷ್ಟೂ ಸರಿಯೋ, ಅದೇ ರೀತಿಯಾಗಿ ಪೂಜೆ ಮಾಡುವ ವಾರಸುದಾರರಿಕೆಯ ಅಧಿಕಾರವನ್ನು ನಿರ್ಧರಿಸುವ ಹಕ್ಕು ಇರುತ್ತದೆ ಎಂಬುದನ್ನು ಅಲ್ಲಗಳೆಯಲು ಬರುವುದಿಲ್ಲ. ಈ ದಾವೆಯಲ್ಲಿ ವಾದಿಯು ತನ್ನ ವಾರಸುದಾರಿಕೆಯಂತೆ ಪೂಜೆ ಮಾಡುವ ಹಕ್ಕು ಇದ್ದು, ಅದರ ಘೋಷಣೆಯನ್ನು ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಹಾಗಾಗಿ, ಪ್ರತಿವಾದಿಯ ವಾದನ್ನು ಉರ್ಜಿತವಾಗಿರುವುದಿಲ್ಲ. ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿದ್ದೇ ಆದಲ್ಲಿ, ದಾವೆಯ ಬಾಹುಳ್ಯ ಹೆಚ್ಚಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಹಾಗಾಗಿ, ದಾವೆಯಲ್ಲಿನ ಸಂಗತಿಗಳನ್ನು ಪರಿಣಾಮಕಾರಿಯಾಗಿ ನಿರ್ಣಯಿಸುವ ನಿಟ್ಟಿನಲ್ಲಿ ಈ ಅರ್ಜಿಯಲ್ಲಿ ನಿರೂಪಿಸಿರುವ ಸಂಗತಿಗಳು ಅವಶ್ಯಕ ಸಂಗತಿಗಳಾಗಿರುತ್ತವೆ. ಆದ್ದರಿಂದ ಅಂಶ-1ನ್ನು ಸಕರಾತ್ಮಕವಾಗಿ ಉತ್ತರಿಸಲಾಯಿತು.

**<u>8. ಅಂಶ 2 :-</u>** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆ,

**<u>ಆದೇಶ</u>**

ಅರ್ಜಿದಾರರು/ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 21 ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151ರಡಿಯಲ್ಲಿನ ಅರ್ಜಿಯನ್ನು ರೂ. 500 ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ ವಾದಿಯು ತನ್ನ ಅರ್ಜಿಯಲ್ಲಿ ನಿರೂಪಿಸಿರುವ ಪ್ರಸ್ತಾಪಿಸಲ್ಪಟ್ಟ ಸಂಗತಿಗಳನ್ನು ತಿದ್ದುಪಡಿ ಮೂಲಕ ವಾದ ಪತ್ರಕ್ಕೆ ಸೇರ್ಪಡೆ ಮಾಡಬೇಕಾಗಿ ಆದೇಶಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 24.04.2026 ರಂದು ಘೋಷಿಸಲಾಯಿತು.)

**(ಕಾವ್ಯಶ್ರೀ ಎಂ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ.,ಕೊಳ್ಳೇಗಾಲ.

(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಘೋಷಿಸಲಾಯಿತು)

<u>ಆದೇಶ</u>

ಅರ್ಜಿದಾರರು/ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 21 ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151ರಡಿಯಲ್ಲಿನ ಅರ್ಜಿಯನ್ನು ರೂ. 500ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ ವಾದಿಯು ತನ್ನ ಅರ್ಜಿಯಲ್ಲಿ ನಿರೂಪಿಸಿರುವ ಪ್ರಸ್ತಾಪಿಸಲ್ಪಟ್ಟ ಸಂಗತಿಗಳನ್ನು ತಿದ್ದುಪಡಿ ಮೂಲಕ ವಾದ ಪತ್ರಕ್ಕೆ ಸೇರ್ಪಡೆ ಮಾಡಬೇಕಾಗಿ ಆದೇಶಿಸಲಾಗಿದೆ.

ತಿದ್ದುಪಡಿ ಮತ್ತು ತಿದ್ದುಪಡಿ ವಾದಪತ್ರ ಕೊಡಲು ತೆರೆದ ನ್ಯಾಯಾಲಯದಲ್ಲಿ ಕರೆಯುವ ದಿನಾಂಕಃ 03.06.2026.

(ಕಾವ್ಯಶ್ರೀ ಎಂ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ.,ಕೊಳ್ಳೇಗಾಲ.